ಪಿರಿಯಾಪಟ್ಟಣದಲ್ಲಿ ಮುನ್ಸೀಫ್ ನ್ಯಾಯಾಲಯವನ್ನು ಸ್ಥಾಪಿಸುವ ಬಗ್ಗೆ

೬೩೪. ಶ್ರೀ ಕೆ. ವೆಂಕಟೇಶ್ (ಪಿರಿಯಾಪಟ್ಟಣ).—ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪಿರಿಯಾಪಟ್ಟಣದಲ್ಲಿ ಮುನ್ಸೀಫ್ ನ್ಯಾಯಾಲಯದ ಅಗತ್ಯವಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಲಕ್ಷ್ಮೀಸಾಗರ (ನಗರಾಭಿವೃದ್ಧಿ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಆ) ಹೌದು.

ಶ್ರೀ ಕೆ. ವೆಂಕಟೇಶ್.—ಮಾನ್ಯ ಸಚಿವರು ಅನುಮೋದನೆ ಸಿಕ್ಕಿದೆ ಎಂದು ಹೇಳಿದರು ಬಹಳ ಸಂತೋಷ. ಯಾವಾಗ ಪ್ರಾರಂಭ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಹೈಕೋರ್ಟಿನವರು ಪಿರಿಯಾಪಟ್ಟಣದಲ್ಲಿ ಮುನ್ಸೀಫ್ ಕೋರ್ಟು ಪ್ರಾರಂಭ ಮಾಡಲು ಒಪ್ಪಿಗೆ ನೀಡಿದೆ. ಹಣಕಾಸಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ೧೯೮೬-೮೭ನೇ ಸಾಲಿನಲ್ಲಿ ಕೋರ್ಟನ್ನು ಸ್ಥಾಪನೆ ಮಾಡತಕ್ಕ ಪ್ರಯತ್ನ ಮಾಡಲಾಗುವುದು.

ಶ್ರೀ ಕೆ. ವೆಂಕಟೇಶ್.—ಸ್ವಾಮಿ, ಪಿರಿಯಾಪಟ್ಟಣ ತಾಲ್ಲೂಕಿನ ಜನ ಹುಣಸೂರಿಗೆ ಹೋಗಬೇಕಾಗಿದೆ. ಪ್ರತಿ ಸಾರಿಯೂ ಮುಂದಿನ ವರ್ಷ ಮಾಡುತ್ತೇವೆಂದು ಹೇಳಿಕೊಂಡು ಬಂದಿದ್ದೀರಿ. ೧೯೮೬-೮೭ನೇ ಇಸವಿಯಲ್ಲಿ ಕಡ್ಡಾಯವಾಗಿ ಮುನ್ಸೀಫ್ ಕೋರ್ಟನ್ನು ಪ್ರಾರಂಭ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ೮೬-೮೭ನೇ ಸಾಲಿನಲ್ಲಿ ಮುನ್ಸೀಫ್ ಕೋರ್ಟು ಕೊಡುವ ವಿಚಾರದಲ್ಲಿ ಪರಿಶೀಲನೆ ಮಾಡಲಾಗುವುದು.

ಅಧ್ಯಕ್ಷರು.—ಮಾನ್ಯ ಶಿವಣ್ಣನವರೇ, ನಿಮ್ಮ ಪ್ರಶ್ನೆಗೆ ಮಂತ್ರಿಗಳು ಉತ್ತರ ತರಿಸಿಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಜಿಲ್ಲಾಧಿಕಾರಿಗಳ ಜೊತೆ ಮಾತನಾಡಿ ಈ ಸಮಸ್ಯೆಯನ್ನು ಬಗೆಹರಿಸೋಣ.

ನಗರ ಪ್ರದೇಶಗಳಲ್ಲಿರುವ ಕೈಗಾರಿಕಾ ಘಟಕಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ಒಯ್ಯುವ ಬಗ್ಗೆ

೬೩೫. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ). - ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರದವರು ನಗರ ಪ್ರದೇಶಗಳಲ್ಲಿ ಇರುವ ಕೈಗಾರಿಕಾ ಘಟಕಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ಒಯ್ಯುವ ಕಾರ್ಯಕ್ರಮಕ್ಕೆ ಬದ್ಧರಾಗಿದ್ದಾರೆಯೇ ?

ಆ) ಹಾಗಿದ್ದಲ್ಲಿ, ಈ ದಿಸೆಯಲ್ಲಿ ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು ?

ಇ) ಸಾವಿರದ ಒಂಭೈನೂರ ಎಂಭತ್ತಮೂರರಿಂದ ಇಲ್ಲಿಯವರೆವಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪಿತಗೊಂಡಿರುವ ಕೈಗಾರಿಕಾ ಘಟಕಗಳ ಸಂಖ್ಯೆ ಎಷ್ಟು ?

ಈ) ಹಿಂದುಳಿದ ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿರುವ ಈ ಕೆಳಕಂಡ ಬೇರೆ ಬೇರೆ ವರ್ಗಗಳಲ್ಲಿರುವ ಕೈಗಾರಿಕಾ ಘಟಕಗಳೆಷ್ಟು ? ಬೃಹತ್ ಕೈಗಾರಿಕೆಗಳು ಮಧ್ಯಮ ಕೈಗಾರಿಕೆಗಳು ಸಣ್ಣ ಕೈಗಾರಿಕೆಗಳು (ವಿವರಗಳನ್ನು ನೀಡುವುದು).

ಶ್ರೀ ಜೆ. ಹೆಚ್. ಪಟೇಲ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ೧೯೮೩–೮೪ ೨೯೧೬,
೧೯೮೪–೮೫ ೪೩೪೩,
೧೯೮೫–೮೬
(೩೧–೧೦–೧೯೮೬ರವರೆವಿಗೆ) ೨೯೬೦

ಈ) ಬೃಹತ್ ಕೈಗಾರಿಕೆಗಳು, ಮಧ್ಯಮ ಕೈಗಾರಿಕೆಗಳು ೨೨೯
ಸಣ್ಣ ಕೈಗಾರಿಕೆಗಳು ೩೩,೮೩೪.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ನನ್ನ ಮೊದಲಿನ ಪ್ರಶ್ನೆಗೆ ನಗರ ಪ್ರದೇಶಗಳಲ್ಲಿರುವ ಕೈಗಾರಿಕಾ ಘಟಕಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ಒಯ್ಯುವ ಕಾರ್ಯಕ್ರಮಕ್ಕೆ ಸರ್ಕಾರ ದವರು ಬದ್ಧರಾಗಿದ್ದಾರೆಯೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದಾರೆ. ''ಡಿಸ್‌ಪರ್ಸಲ್ ಆಫ್ ಇಂಡಸ್ಟ್ರೀ ಫ್ರಂಸಿಟೀಸ್‌ಟು ರೂರಲ್ ಏರಿಯಾ'' ಎಂದು ಇದೆ ಅದನ್ನು ತಾವು ನೋಡಿದ್ದೀರಾ? ಅದನ್ನು ಕೇಂದ್ರ ಸರ್ಕಾರ ಕೂಡ ಒಪ್ಪಿಕೊಂಡಿರತಕ್ಕಂಥಾದ್ದು ತಮಗೆ ಗೊತ್ತಿದೆಯೆ ? ತಾವು ಏನು ಮಾಡಿದ್ದೀರಿ ? ಅದನ್ನು ತರಿಸಿ ನೋಡುವಂಥ ಪ್ರಯತ್ನ ಮಾಡುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್,—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಕೇಳಿರುವುದು, ಈಗ ಇರತಕ್ಕ ಕೈಗಾರಿಕಾ ಘಟಕಗಳನ್ನು, ಅಂದರೆ ನಗರ ಪ್ರದೇಶಗಳಲ್ಲಿರತಕ್ಕ ಘಟಕಗಳನ್ನು ಹಳ್ಳಿಗಾಡಿಗೆ ವರ್ಗಾಯಿಸತಕ್ಕ ನೀತಿ ಸರ್ಕಾರಕ್ಕೆ ಇದೆಯೇ ಎಂದು. ಹೊಸದಾಗಿ ಕೈಗಾರಿಕೆಗಳನ್ನು ಪ್ರಾರಂಭ ಮಾಡ ಬೇಕಾದರೆ, ಗ್ರಾಮೀಣ ಪ್ರದೇಶಗಳಲ್ಲಿ, ಹಿಂದುಳಿದ ಪ್ರದೇಶಗಳಲ್ಲಿ ಹೋಗಿ ಪ್ರಾರಂಭ ಮಾಡಿದರೆ, ಕೆಲವು ಪ್ರೋತ್ಸಾಹಗಳನ್ನು ಕೊಡುತ್ತಿದ್ದೇವೆ. ಬೆಂಗಳೂರು, ಮೈಸೂರಿನಂತಹ ನಗರಗಳಲ್ಲಿ ಕೈಗಾರಿಕೆಗಳನ್ನು ಮಾಡುವುದಾದರೆ ಡಿಸ್ಕರೇಜ್ ಮಾಡಿದ್ದೇವೆ, ಕೇಂದ್ರಸರ್ಕಾರ ಲೈಸೆನ್ಸ್ ಕೊಟ್ಟರೂ ಕೂಡ ಬೀದರ್ ಮಂತ್ತು ಗುಲ್ಬರ್ಗ ಜಿಲ್ಲೆಗಳಿಗೆ ಹೋಗಿ ಎಂದು ಹೇಳಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ —ನನ್ನ ಪ್ರಶ್ನೆ ಬಹುಶಃ ಅಚ್ಚು ಆಗುವುದರಲ್ಲಿ ತಪ್ಪಾಗಿರಬಹುದು. ಸರ್ಕಾರದ ನೀತಿ ಇವತ್ತಿನಿಂದ ಹಳ್ಳಿಗಾಡಿನ ಪ್ರದೇಶದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ನೀತಿ ಇದೆಯೇ? ನಗರ ಪ್ರದೇಶಗಳಲ್ಲಿರತಕ್ಕವುಗಳನ್ನು ವಿಮಾನದಲ್ಲಿ ತೆಗೆದುಕೊಂಡು ಹೋಗಿ ಹಾಕಿ ಎಂದು ನಾನು ಕೇಳಿಲ್ಲ.

ಎರಡನೆಯದಾಗಿ, ಹಿಂದುಳಿದ ಜಿಲ್ಲೆಗಳಿಗೆ ನೀವು ವರ್ಗಾಯಿಸಿರುವ ಕೈಗಾರಿಕಾ ಘಟಕಗಳೆಷ್ಟು ? ಬೃಹತ್ ಕೈಗಾರಿಕೆಗಳನ್ನು ಎಷ್ಟು ವರ್ಗ ಮಾಡಿದ್ದೀರಿ ? ಇಲ್ಲಿಯವರೆಗೆ ಎಷ್ಟು ಕೈಗಾರಿಕೆಗಳಿವೆ ಎಂದೂ ನಾನು ಕೇಳಿಲ್ಲ. ಈ ಪ್ರಶ್ನೆ ಸರಿಯಾಗಿಲ್ಲವೆಂದು ಕಾಣುತ್ತದೆ. ನೀವು ಅಧಿಕಾರಕ್ಕೆ ಬಂದ ಮೇಲೆ ಭಾರಿ ಪ್ರಮಾಣದ, ಮಧ್ಯಮ ಪ್ರಮಾಣದ ಮತ್ತು ಸಣ್ಣ ಪ್ರಮಾಣದ ಎಷ್ಟು ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ್ದೀರಿ ಎಂದು ಹೇಳಿದರೆ ನನಗೆ ಸಂತೋಷವಾಗುತ್ತದೆ.

ಶ್ರೀ ಜೆ. ಎಚ್. ಪಟೇಲ್,—ಅವರು ಪ್ರಶ್ನೆ ಕೇಳಿದ್ದು ಈ ಅರ್ಥದಲ್ಲಿ ಅಲ್ಲವೆಂದರೆ, ನಾನು ಉತ್ತರ ಹೇಳಿದ್ದು ಕೂಡ ಆ ಅರ್ಥದಲ್ಲಿ ಅಲ್ಲ. ಹಿಂದುಳಿದ ಪ್ರದೇಶಗಳಲ್ಲಿ ಕೈಗಾರಿಕಾ ಘಟಕಗಳನ್ನು ಸ್ಥಾಪನೆ ಮಾಡಬೇಕೆನ್ನುವುದು ನಮ್ಮ ನೀತಿ. ನಾವು ಅಧಿಕಾರಕ್ಕೆ ಬಂದಮೇಲೆ ಗ್ರಾಮಾಂತರ ಪ್ರದೇಶ ಗಳಲ್ಲಿ ಎಷ್ಟು ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ್ದೇವೆ ಎನ್ನುವುದನ್ನು ನಾನು ಹೇಳಿದ್ದೇನೆ. ಈಗ ಹಿಂದುಳಿದ ಪ್ರದೇಶಗಳಲ್ಲಿ ಎಷ್ಟೆಷ್ಟು ಕೈಗಾರಿಕೆಗಳನ್ನು ಸ್ಥಾಪನೆ ಮಾಡಲಾಗಿದೆ ಎಂಬುದನ್ನು ಕೂಡ ಲಾಗಿದೆ. ೧೯೮೩ ರಿಂದೀಚೆಗೆ ಎಷ್ಟು ಕೈಗಾರಿಕಾ ಘಟಕಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಸ್ಥಾಪನೆ ಮಾಡಿದ್ದೇವೆ ಎನ್ನುವ ವಿವರಗಳನ್ನು ಬೇಕಾದರೆ ಅವರಿಗೆ ಕೊಡುತ್ತೇನೆ.